ದಿನಾಂಕಃ 18-07-2018 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಎನ್ ಎಂ ವಕೀಲರಿಂದಃ**

ನಾನು ವಾದಿಯ ಜಿ ಪಿ ಎ ಆಗಿದ್ದು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಶಪಥ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಮ್ಮ ವಕೀಲರು ನನ್ನ ಹೇಳಿಕೆಯ ಮೇರೆಗೆ ತಯಾರಿಸಿದ್ದಾರೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ, ಇದರಲ್ಲಿ ಇರುವ ಸಹಿ ನನ್ನದು.

ಸಾಕ್ಷಿಯು ವಾದಿ ಪರ ಗುರುತಿಸಿದ ನಿಪಿ 1 ರಿಂದ 18 ದಾಖಲೆಗಳನ್ನು ನೋಡಿ ಒಪ್ಪುತ್ತಾರೆ. ಜಿ ಪಿ ಎ ಯನ್ನು ನಿಪಿ 19 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯಲ್ಲಿ ಕೇಳಿಕೊಂಡಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಜಿ ಆರ್ ಎ ವಕೀಲರಿಂದಃ**

ಪ್ರತಿವಾದಿಯ ಕುಟುಂಬದ ಮೂಲಪುರುಷ ಕಾಳೇಗೌಡ ಎಂದರೆ ಸರಿ. ಸದರಿ ಕಾಳೇಗೌಡನಿಗೆ ಮೊಗಣ್ಣಗೌಡ ಹಾಗೂ ಸಿದ್ದೇಗೌಡ ಇಬ್ಬರು ಮಕ್ಕಳು ಎಂದರೆ ಸರಿ. ಸದರಿ ಮೊಗಣ್ಣಗೌಡರಿಗೆ ಈರಮ್ಮ ಮತ್ತು ದೇವಮ್ಮ ಇಬ್ಬರು ಹೆಂಡತಿಯರು ಎಂದರೆ ಸರಿ. ಸದರಿ ಈರಮ್ಮಳಿಗೆ ಕಾಳೇಗೌಡ ಮತ್ತು ಸಿದ್ದಲಿಂಗೇಗೌಡ ಇಬ್ಬರು ಮಕ್ಕಳು ಎಂದರೆ ಸರಿ. ವಾದಿ ಸಿದ್ದಲಿಂಗೇಗೌಡ ಹೆಂಡತಿ ಎಂದರೆ ಸರಿ. ಕಾಳೇಗೌಡನಿಗೆ 1 ನೇ ಮಗ ಚಂದ್ರೇಗೌಡ , ಎರಡನೇ ಮಗ ಮಾದೇಗೌಡ , 3 ನೇ ಮಗ ನಿಂಗೇಗೌಡ , 4 ನೇ ಮಗಳು ಭಾಗ್ಯಮ್ಮ, 5 ನೇಯವನು ರಮೇಶ ಎಂದರೆ ಸರಿ. ದೇವಮ್ಮ ಇವರ 1 ನೇ ಮಗಳು ಹಲಗಮ್ಮ ಎಂದರೆ ಸರಿ. ಸದರಿ ದೇವಮ್ಮ ಇವರ 2 ನೇ ಮಗ ಪ್ರತಿವಾದಿಯ ತಂದೆ ಎಂದರೆ ಸರಿ. 3 ನೇ ಮಗ ಮೊಗಣ್ಣ ಗೌಡ, 4 ನೇಯವನು ಬೈರೇಗೌಡ , 5 ನೇಯವನು ಸಿದ್ದೇಗೌಡ , 6 ನೇ ಯವನು ಕೃಷ್ಣೇಗೌಡ , 7 ನೇ ಯವನು ಶಿವಣ್ಣಗೌಡ ಎಂದರೆ ಸರಿ.

ಪ್ರತಿವಾದಿಯ ತಂದೆ ಎಂ. ನಿಂಗೇಗೌಡರ ಹೆಂಡತಿ ದೇವಮ್ಮ ಎಂದರೆ ಸರಿ. ಸದರಿ ನಿಂಗೇಗೌಡರ ಮಗಳು ಭಾಗ್ಯಮ್ಮ ಎಂದರೆ ಸರಿ. ಕೆ ಎನ್ ನಾಗರಾಜು 2 ನೇ ಮಗ ಎಂದರೆ ಸರಿ. ಜಯಮ್ಮ 3 ನೇ ಮಗಳು ಎಂದರೆ ಸರಿ. 4 ನೇ ಮಗಳು ಸರೋಜಮ್ಮ ಎಂದರೆ ಸರಿ. 5 ನೇಯವರು ಕಾಳೇಗೌಡ ಎಂದರೆ ಸರಿ. 6 ನೇ ಯವರು ನಾಗರತ್ನಮ್ಮ ಎಂದರೆ ಸರಿ. 7 ನೇಯವರು ಯಶೋದಮ್ಮ ಎಂದರೆ ಸರಿ. ಮಂಜುಳ ಇವರ ತಂದೆ ಓ ಎಸ್ 362ಃ2010 ರಂತೆ ಇದೇ ಕೋರ್ಟಿನಲ್ಲಿ ಕೇಸು ಹಾಕಿದ್ದಾರೆ ಎಂದರೆ ಸರಿ. ಚಂದ್ರೇಗೌಡರ ತಮ್ಮ ಮಾದೇಗೌಡ ಎಂದರೆ ಸರಿ. ನಿಂಗೇಗೌಡ ಉರುಪ್ ಮೂಗ ಇನ್ನೊಬ್ಬ ಸಹೋದರ ಎಂದರೆ ಸರಿ. ಚಂದ್ರೇಗೌಡ, ನಿಂಗೇಗೌಡ, ಮಾದೇಗೌಡ, ಭಾಗ್ಯಮ್ಮ ಮತ್ತು ರಮೇಶ ಇವರು ಕಾಳೇಗೌಡರ ಮಕ್ಕಳು ಎಂದರೆ ಸಿದ್ದಲಿಂಗೇಗೌಡರ ಅಣ್ಣನ ಮಕ್ಕಳು ಎಂದರೆ ಸರಿ. ಮೊಗಣ್ಣಗೌಡರ ತಮ್ಮ ಸಿದೇಗೌಡ ಉರುಪ್ ಶಿಳ್ಳೇ ಸಿದ್ದೇಗೌಡ ಎಂದರೆ ಸರಿ. ಸದರಿ ಶಿಳ್ಳೇ ಸಿದ್ದೇಗೌಡರಿಗೆ 1 ನೇಯವನು ಸಿದ್ದಮ್ಮ , 2 ನೇಯವರು ಸಣ್ಣನಿಂಗಮ್ಮ, 3 ನೇಯವರು ಜೋಗಿನಿಂಗೇಗೌಡ , 4 ನೇಯವರು ಸಣ್ಣಸಿದ್ದೇಗೌಡ ಎಂದರೆ ಸರಿ. ನಮ್ಮ ತಾಯಿ ಹೆಸರು ಸರೋಜಮ್ಮ ಎಂದರೆ ಸರಿ. ಸದರಿ ಸರೋಜಮ್ಮನ ತಾಯಿ ವಾದಿ ಎಂದರೆ ಸರಿ. ವಾದಿಯ ತಂದೆ ಮಾಯಪ್ಪ ಎಂದರೆ ಸರಿ. ಮಾಯಪ್ಪ ತಾಯಿ ಮಲ್ಲಮ್ಮ ತೀರಿಕೊಂಡು ಸುಮಾರು 60 – 70 ವರ್ಷ ಆಗಿರಬಹುದು ಎಂದರೆ ಸರಿ. ಸದರಿ ಮಲ್ಲಮ್ಮಳಿಗೆ ನಮ್ಮ ತಂದೆ ಮಾಯಪ್ಪ ಒಬ್ಬನೇ ಮಗ ಎಂದರೆ ಸರಿ . ಸದರಿ ಮಾಯಪ್ಪನಿಗೆ 3 ಜನ ಗಂಡುಮಕ್ಕಳು. ಹಾಗೂ 3 ಜನ ಹೆಣ್ಣುಮಕ್ಕಳು ಎಂದರೆ ಸರಿ. 1 ನೇಯವರು ವಾದಿ , 2 ನೇಯವರು ಜವರೇಗೌಡ , 3 ನೇಯವರು ಬೀರಮ್ಮ , 4 ನೇಯವರು ಮರಿಯಪ್ಪ , 5 ನೇಯವರು ಕೃಷ್ಣೇಗೌಡ , 6 ನೇಯವರು ಮಾಯಮ್ಮ . ಮಾಯಪ್ಪನ ಮಕ್ಕಳು ತೀರಿಕೊಂಡು ಸುಮಾರು 10 – 15 ವರ್ಷ ಆಗಿರಬಹುದು ಎಂದರೆ ಸರಿ. ನಾನು ಚಿಕ್ಕವನಿದ್ದಾಗ ನಮ್ಮ ತಂದೆಯವರು ಮನೆ ಬಿಟ್ಟು ಹೋಗಿದ್ದು ಸದರಿಯವರು ಸತ್ತಿದ್ದಾರೋ ಅಥವಾ ಬದುಕಿದ್ದಾರೋ ಇವತ್ತಿನವರೆಗೂ ಗೊತ್ತಿಲ್ಲ ಎಂದರೆ ಸರಿ. ಮರಿಯಪ್ಪ ನಾನು ಹುಟ್ಟುವುದಕ್ಕಿಂತ ಮುಂಚೆ ತೀರಿಕೊಂಡರು ಎಂದರೆ ಸರಿ. ಈ ಹಿಂದೆ ಮಾಯಪ್ಪನ ಜಮೀನಿನಲ್ಲಿ ಮಾಯಪ್ಪನ ಕಟ್ಟೆ

ಇತ್ತು ಎಂದರೆ ಗೊತ್ತಿಲ್ಲ. ಸದರಿ ಮಾಯಪ್ಪನ ಜಮೀನು 1975 ರಲ್ಲಿ ಸರ್ಕಾರದಿಂದ ಸ್ವಾಧೀನಪಡಿಸಿಕೊಂಡಿದ್ದು ಅಲ್ಲಿ ನೀರಿನ ಟ್ಯಾಂಕ್ ಕಟ್ಟಿದು ನೂರಾರು ಮನೆ ಕಟ್ಟಿದ್ದಾರೆ ಎಂದರೆ ಸಾಕ್ಷಿಯು ಸದರಿ ಜಮೀನು ಅಕ್ವೇರ್ ಆಗಿದ್ದು ಗೊತ್ತು ಆದರೆ ಮನೆ ಕಟ್ಟಿಸಿದ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಜಮೀನಿನ ಪೂರ್ವಕ್ಕೆ ಮೈಸೂರು - ಚನ್ನರಾಯಪಟ್ಟಣ ರಸ್ತೆ ಎಂದರೆ ಸರಿ. ಮಾಯಪ್ಪನ ಜಮೀನು ಸರ್ಕಾರ ಸ್ವಾಧೀನಪಡಿಸಿಕೊಂಡ ನಂತರ ಈಗಾಗಲೇ ಪರಿಹಾರ ಹಣ ಪಡೆದಿದ್ದಾರೆ ಎಂದರೆ ಗೊತ್ತಿಲ್ಲ. ಮೊಗಣ್ಣಗೌಡ ಹಾಗೂ ಕಾಳೇಗೌಡರ ಜಮೀನು ಸಹ 1975 ರಲ್ಲಿ ಸರ್ಕಾರದಿಂದ ಸ್ವಾದೀನಪಡಿಸಿಕೊಳ್ಳಲಾಗಿದೆ ಎಂದರೆ ಗೊತ್ತಿಲ್ಲ. ಕೆ ಆರ್ ಪೇಟೆ ಟೌನ್ ನ ರಶ್ಮಿ ವೈನ್ಸ್ ಪಕ್ಕ ಉತ್ತರಕ್ಕೆ ಮೊಗಣ್ಣಗೌಡ ಮತ್ತು ಕಾಳೇಗೌಡರ ಜಮೀನು ಈಗ ಇಲ್ಲ ಎಂದರೆ ಸರಿ. ದಾವಾ ಜಮೀನಿನ ದಕ್ಷಿಣಕ್ಕೆ ಬುಡುಗಿ ಸಿಂಗ್ರೀ ವಗೈರೆಯವರ ಜಮೀನು ಯಾರದು ಎಂದು ಗೊತ್ತಿಲ್ಲ ಹಾಗೂ ನಾನು ಸದರಿಯವರನ್ನು ನೋಡಿಲ್ಲ. ಸದರಿ ಬುಡುಗಿ ಸಿಂಗ್ರೀ ಮಕ್ಕಳು ಯಾರು ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನಿನ ಉತ್ತರಕ್ಕೆ ಈಗ ಪಾರ್ಕ್ ಮತ್ತು ಗ್ರಾಮಭಾರತಿ ಇದೆ ಎಂದರೆ ಸುಳ್ಳು. ಬುಡುಗಿ ಸಿಂಗ್ರೀಯವರ ಜಮೀನು ಇಲ್ಲ ಸಾಕ್ಷಿಯು ಮುಂದುವರೆದು ರಶ್ಮಿ ವೈನ್ಸ್ ಸದರಿ ಬುಡುಗಿ ಸಿಂಗ್ರೀ ರವರ ಜಮೀನು ಇರುವುದಿಲ್ಲ ಎನ್ನುತ್ತಾರೆ. ದಾವಾ ಜಮೀನಿನ ಪಶ್ಚಿಮಕ್ಕೆ , ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಈಗ ಹಾಲಿ ಯಾವುದೇ ಜಮೀನು ಇಲ್ಲ ಸದರಿ 3 ದಿಕ್ಕಿನ ಕಡೆ ಈಗ ಮನೆ ಕಟ್ಟಿದ್ದಾರೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.

ದಿನಾಂಕಃ 25-07-2018 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಕೆ ಎನ್ ಎನ್ ವಕೀಲರಿಂದಃ**

ದಾವಾ ಷೆಡ್ಯೂಲ್ ಚೆಕ್ಕುಬಂದಿಯಲ್ಲಿ 180 ಸರ್ವೇ ನಂಬರ್ 13 ಗುಂಟೆ ಜಮೀನು ಇಲ್ಲ. ಸದರಿ ಜಮೀನು ಅಸ್ತಿತ್ವದಲ್ಲಿ ಇಲ್ಲ. ನನಗೆ ಪೂರ್ವ ಪಶ್ಚಿಮ, ಉತ್ತರ ದಕ್ಷಿಣ ದಿಕ್ಕುಗಳ ಬಗ್ಗೆ ಗೊತ್ತು. ನನ್ನ ತಾತ ಸಿದ್ದಲಿಂಗೇಗೌಡರ ಜಮೀನಿನ ದಕ್ಷಿಣಕ್ಕೆ ಬುಡುಗಿ ಸಿಂಗ್ರಿ ಇವರ ಜಮೀನು ಅದರ ನಂತರ ನಮ್ಮ ತಾತನ ಸಿದ್ದಲಿಂಗೇಗೌಡರ ಜಮೀನು ಅದಾದ ನಂತರ ಕಾಳೇಗೌಡರ ಜಮೀನು, ಅದಾದ ನಂತರ ಪ್ರತಿವಾದಿಯ ತಂದೆಯವರ ಜಮೀನು, ಅದಾದ ನಂತರ ಜೋಗಿ ನಿಂಗೇಗೌಡರ ಜಮೀನು ಈ ಜಮೀನುಗಳ ಬಗ್ಗೆ ನನಗೆ ಗೊತ್ತಿಲ್ಲ. ಬುಡುಗಿ ಸಿಂಗ್ರಿ ಜಮೀನಿನ ಉತ್ತರಕ್ಕೆ ಸಿದ್ದಲಿಂಗೇಗೌಡರ ಜಮೀನು ಇದೆ ಎಂದರೆ ಸುಳ್ಳು.

ಗ್ರಾಮ ಭಾರತೀಯ ಉತ್ತರಕ್ಕೆ ನೇರವಾಗಿ ಹೇಮಗಿರಿ ರಸ್ತೆ ಇದೆ ಎಂದರೆ ಸರಿ. ಮೈಸೂರು ಚನ್ನರಾಯಪಟ್ಟಣ ರಸ್ತೆ ಈ ಹಿಂದೆ ಒಂದು ಕಲ್ಲು ಮಂಟಪ ಇತ್ತು ಎಂದರೆ ಸರಿ. ಸದರಿ ಕಲ್ಲು ಮಂಟಪದ ಪಕ್ಕ ದೊಡ್ಡಚಿಕ್ಕನ ಮಕ್ಕಳು ಜಮೀನು ಇದ್ದು ಅಲ್ಲಿ ಅವರು ಬ್ಯುಲ್ಡಿಂಗ್ ಕಟ್ಟಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ನಿಪಿ10 ಯಾರು ಕೊಟ್ಟಿದ್ದಾರೆ ಅಂತ ನನಗೆ ಗೊತ್ತಿಲ್ಲ. ಅಮ್ಮಣ್ಣಮ್ಮನಿಗೆ ಜಗದೀಶನಿಗೆ ಮತ್ತೆ ಶಿವಮ್ಮಳಿಗೆ ಜೋಗಿನಿಂಗೇಗೌಡರ ಮಕ್ಕಳು ಜವರಮ್ಮ ಮತ್ತು ಅವರ ಮಗ ನಾಗರಾಜು ಜಮೀನು ಮಾರಾಟ ಮಾಡಿರುವ ವಿಚಾರ ಗೊತ್ತಿಲ್ಲ. ಸದರಿ ಜಮೀನು ಪಕ್ಕ ಸರ್ವೇ ನಂಬರ್ 362 ರ ವಾದಿ ಚಂದ್ರೇಗೌಡ, ಆತನ ಸಹೋದರರಾದ ಕೆ.ಕೆ ಮಾದೇಗೌಡ, ಕೆ.ಕೆ ರಮೇಶ ಮತ್ತು ನಿಂಗರಾಜು ಇವರು ಈರಪ್ಪನ ಮಗ ಲಕ್ಕೇಗೌಡ ಉರುಫ್ ಮೊಗಣ್ಣ ದಿನಾಂಕ 05.05.1993 ರಂದು 03 ಗುಂಟೆ ಜಮೀನು ಮಾರಾಟ ಮಾಡಿರುವ ವಿಚಾರ ಗೊತ್ತಿಲ್ಲ. ಸದರಿ ದಿನದಂದು ಹುಚ್ಚೇಗೌಡನ ಹೆಂಡತಿ ನಾಗರತ್ನಮ್ಮನಿಗೆ 2 ಗುಂಟೆ ಜಮೀನು ಮಾರಾಟ ಮಾಡಿರುವ ವಿಚಾರ ಗೊತ್ತಿಲ್ಲ. ನಂತರ ದಿನಾಂಕ 06.05.1993 ರಂದು ಬಿ.ಎಂ ನಂಜೇಗೌಡರ ಹೆಂಡತಿ ಶಶಿಕಲ ಇವರಿಗೆ ಚಂದ್ರೇಗೌಡ, ಆತನ ಸಹೋದರರಾದ ಕೆ.ಕೆ ಮಾದೇಗೌಡ, ಕೆ.ಕೆ ರಮೇಶ ಮತ್ತು ನಿಂಗರಾಜು ಇವರು ಈರಪ್ಪನ ಮಗ ಲಕ್ಕೇಗೌಡ ಉರುಫ್ ಮೊಗಣ್ಣ 3 ಗುಂಟೆ ಜಮೀನು ಮಾರಾಟ ಮಾಡಿರುವ ವಿಚಾರ ಗೊತ್ತಿಲ್ಲ. ಸದರಿ ಮಾರಾಟದ ವಿಚಾರವಾಗಿ ನಾನು ಎಸಿ ಕೋರ್ಟ್ನಲ್ಲಿ ಆರ್ ಮಿಸ್ 84/15-16 ರಂತೆ ಕೇಸು ಹಾಕಿದ್ದೆ ಎಂದರೆ ಸರಿ. ಸದರಿ ಕೇಸಿನಲ್ಲಿ ನಾನು ಅಮ್ಮಣ್ಣಮ್ಮ, ಶಿವಮ್ಮ ಹಾಗೂ ಬಿ.ಎಂ ಜಗದೀಶ್ ಇವರನ್ನು ಪಾರ್ಟಿ ಮಾಡಿದ್ದೆ ಎಂದರೆ ಸರಿ. ಸದರಿ ಮೂರು ಜನ ಮನೆ ಕಟ್ಟಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ.

ಪೂರ್ವಕ್ಕೆ ಈರಪ್ಪನ ಮಗ ಲಕ್ಕೇಗೌಡ ಉರುಫ್ ಮೊಗಣ್ಣನ ಜಮೀನು ಮತ್ತು ಹುಚ್ಚೇಗೌಡನ ಮಗಳು ನಾಗರತ್ನನ ಜಮೀನು, ಪಶ್ಚಿಮಕ್ಕೆ ತಮ್ಮಯ್ಯನ ಜಮೀನು, ಉತ್ತರಕ್ಕೆ ರಾಮೇಗೌಡನ ಹೆಂಡತಿ ಕಮಲಮ್ಮಳ ಜಮೀನು, ದಕ್ಷಿಣಕ್ಕೆ ಖಾಡನ ಸಿದ್ದೇಗೌಡ ಮತ್ತು ಮಕ್ಕಳ ಜಮೀನು ಈ ಚೆಕ್ಕುಬಂದಿಯಲ್ಲಿ ಇರುವ ಜಮೀನು ನಾನು ನೋಡಿಲ್ಲ. ಉತ್ತರಕ್ಕೆ ಇರುವ ಕಮಲಮ್ಮಳ ಜಮೀನು ಹಾಗೂ ದಕ್ಷಿಣಕ್ಕೆ ಇರುವ ಸಿದ್ದೇಗೌಡ ಮತ್ತು ಮಕ್ಕಳಿಗೆ ಪಿತ್ರಾರ್ಜಿತವಾಗಿ ಬಂದಿದೆ ಎಂದರೆ ಗೊತ್ತಿಲ್ಲ. ಸದರಿ ಸಿದ್ದೇಗೌಡನ ಮಕ್ಕಳಾದ ಅಮಾಸೇಗೌಡ, ಚಿಕ್ಕೇಗೌಡ, ಶಂಕರ, ಮಾದೇಗೌಡ ಮತ್ತು ವರದರಾಜು ಗೊತ್ತಿಲ್ಲ. ನಿಪಿ9 ರಲ್ಲಿ ಕಾಣುವ ಮನೆಯ ದಕ್ಷಿಣಕ್ಕೆ ಯಾರು ಯಾರು ಮನೆ ಕಟ್ಟಿದ್ದಾರೆ ಎಂದು ಗೊತ್ತಿಲ್ಲ. ಬುಡುಗಿ ಸಿಂಗ್ರಿ ಇವರು ನಾಯಕ ಜನಾಂಗಕ್ಕೆ ಸೇರಿದವರಾಗಿದ್ದು ಸದರಿ ಜನಾಂಗದವರು ಜಾಸ್ತಿ ಇದ್ದಾರೆ ಎಂದರೆ ಸರಿ. ನಮ್ಮ ಮನೆಯಿಂದ 3 ನೇ ಮನೆ ಹತ್ತಿರ ಒಂದು ಸರ್ಕಲ್ ಇದ್ದು ಅದರ ದಕ್ಷಿಣಕ್ಕೆ ಮೇಲೆ ಹೇಳಿದ ಐದು ಜನರ ಮನೆ ಇದೆ ಎಂದರೆ ಗೊತ್ತಿಲ್ಲ. ಖಾಡು ಸಿದ್ದ ಮತ್ತು ಆತನ ಮಕ್ಕಳು ಕುರುಬರು ಎಂದರೆ ಸರಿ. ಬುಡುಗಿ ಸಿಂಗ್ರಿಯಿಂದ ಕಾಡು ಸಿದ್ದ ಇವರಿಗೆ ಜಮೀನು ಹೋಗಿದೆ ಎಂದರೆ ಗೊತ್ತಿಲ್ಲ. ದಾವಾ ಜಮೀನಿನ ದಕ್ಷಿಣಕ್ಕೆ ಷೆಡ್ಯೂಲ್ನಲ್ಲಿ ತೋರಿಸಿರುವ ಬುಡುಗಿ ಸಿಂಗ್ರಿ ವಂಶಸ್ಥರು ಈಗ ಯಾರು ಇಲ್ಲ ಎಂದರೆ ಗೊತ್ತಿಲ್ಲ. ಕಮಲಮ್ಮನ ಗಂಡ ರಾಮೇಗೌಡ ತೀರಿಕೊಂಡು ಈಗಾಗಲೇ 30 ವರ್ಷ ಆಯಿತು ಎಂದರೆ ಗೊತ್ತಿಲ್ಲ. ರಾಮೇಗೌಡರ ಅಪ್ಪ ಹನುಮಂತು ತೀರಿಕೊಂಡು ಈಗಾಗಲೇ ಸುಮಾರು 60, 70 ವರ್ಷ ಆಯಿತು ಎಂದರೆ ಗೊತ್ತಿಲ್ಲ. ಕಮಲಮ್ಮಳಿಗೂ ನಮ್ಮ ತಾತ ಹಾಗೂ ಚಂದ್ರೇಗೌಡ ಮತ್ತು ಕಾಳೇಗೌಡ ಮತ್ತು ಎಂ.ನಿಂಗೇಗೌಡ ಅಂದರೆ

1 ನೇ ಪ್ರತಿವಾದಿಯ ತಂದೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಜಗದೀಶ್ ಬಿನ್ ಬೈರೇಗೌಡ ಇವರನ್ನು ನನ್ನ ಪರವಾಗಿ ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಲಿಸ್ಟ್ ಕೊಟ್ಟಿದ್ದೇನೆ ಎಂದರೆ ಸರಿ. ಸದರಿ ಜಗದೀಶನ ತಾಯಿ ದೇವರಾಜಮ್ಮ ಇವಳನ್ನು ನೋಡಿದ್ದೇನೆ. ದೇವರಾಜಮ್ಮನ ತಂದೆ ಜವರೇಗೌಡ ಗೊತ್ತು ಅವರು ತೀರಿಕೊಂಡು ಸುಮಾರು 40 ವರ್ಷ ಆಯಿತು ಎಂದರೆ ಗೊತ್ತಿಲ್ಲ. ಜೋಗಿನಿಂಗೇಗೌಡ ಹಾಗೂ ಜವರೇಗೌಡ ತಮ್ಮಯ್ಯನಿಗೆ ಜಮೀನು ಮಾರಾಟ ಮಾಡಿದ್ದು ಈಗ ಅಲ್ಲಿ ತಮ್ಮಯ್ಯ ಇದ್ದಾನೆ ಎಂದರೆ ಸರಿ. ತಮ್ಮೇಗೌಡನ ಜಮೀನಿನ ಪೂರ್ವಕ್ಕೆ ಕಾಳೇಗೌಡರು ಮತ್ತು ಅವರು ಕುಟುಂಬದವರು ಮನೆ ಕಟ್ಟುತ್ತಿದ್ದಾರೆ ಎಂದರೆ ಸದರಿಯವರು ಅಕ್ರಮವಾಗಿ ಕಟ್ಟುತ್ತಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಅಕ್ರಮವಾಗಿ ಮನೆ ಕಟ್ಟುತ್ತಿದ್ದಾರೆ ಎಂದು ಹೇಳುತ್ತಾರೆ. ಮಾಯಪ್ಪನಿಗೂ ಹಾಗೂ ಸಿದ್ದಲಿಂಗೇಗೌಡರ ಮಕ್ಕಳು ಜವರೇಗೌಡರಿಗೂ ಯಾವುದೇ ಸಂಬಂಧ ಇಲ್ಲ. ನಾನು ಟೌನಿಗೆ ಬರಬೇಕಾದರೆ ಖಾಡು ಸಿದ್ದನ ಮನೆಯ ಮುಂದೆ ಹಾದು ಬರಬೇಕು ಎಂದರೆ ಸಾಕ್ಷಿಯು ವರದರಾಜು ಗೊತಿಲ್ಲ ಎನ್ನುತ್ತಾರೆ. 54 ಗುಂಟೆ ಜಮೀನು ಸರ್ವೇ ನಂಬರ್ 10/2 ರಲ್ಲಿ ಪ್ರತಿವಾದಿ ಒಂದೇ ಮನೆ ಕಟ್ಟುತ್ತಿದ್ದಾರೆ ಎಂದರೆ ಸರಿ. ಚಂದ್ರೇಗೌಡ ಇವರು ಸರ್ವೇ ನಂಬರ್ 352/2015 ರಂತೆ ಇದೇ ನ್ಯಾಯಾಲಯದಲ್ಲಿ ಸರ್ವೇ 10/2 ಕ್ಕೆ ಸಂಬಂಧಿಸಿದಂತೆ ಕೇಸು ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯ ತಂದೆ ಎಂ.ನಿಂಗೇಗೌಡನಿಗೆ ಸರ್ವೇ 10/2 ರಲ್ಲಿ 27 ಗುಂಟೆ, 10/2 ರಲ್ಲಿ 9 ಗುಂಟೆ ಪ್ರತಿವಾದಿಗೆ, ನಾಗರತ್ನಮ್ಮ, ಮಂಜಮ್ಮ ಮತ್ತು ನಾಗಮ್ಮ ಅಧ್ಬಸ್ತ್ ದುರಸ್ತಿ ಮಾಡಿ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ದಿನಾಂಕ 27.02.1982 ರಂದು ನನ್ನ ಪರವಾಗಿ ಸಾಕ್ಷಿ ಹಾಕಿರುವ ಜಗದೀಶ ಇವರ ತಾತ ಜವರೇಗೌಡ ಇವರು ನೋಂದಾಯಿತ ಆಧಾರ ಪತ್ರವನ್ನು ಕೋ ಆಪರೇಟಿವ್ ಸೊಸೈಟಿಗೆ ಮಾಡಿಕೊಟ್ಟು ಸಾಲ ಪಡೆದ ವಿಚಾರ ಗೊತ್ತಿಲ್ಲ. ಸದರಿ ಜಗದೀಶ್ ಇವರ ಜಮೀನಿನ ಪಶ್ಚಿಮಕ್ಕೆ ಸಬ್ ರಿಜಿಸ್ಟ್ರಾರ್ ಆಗಿದ್ದ ನರಸಿಂಹ ಇವರ ತಂದೆ ದಾಳಿ ಚೆಲುವಪ್ಪ ಇವರ ಜಮೀನು, ಉತ್ತರಕ್ಕೆ ಕೆಂಚಮ್ಮನ ಜಮೀನು, ದಕ್ಷಿಣಕ್ಕೆ ಹೇಮಗಿರಿ ರಸ್ತೆ, ಪೂರ್ವಕ್ಕೆ ಪ್ರತಿವಾದಿಯ ತಂದೆ ಜಮೀನು ಎಂದರೆ ಗೊತ್ತಿಲ್ಲ. ಪ್ರತಿವಾದಿಯ ೀತಂದೆಗೆ ನಿಂಗಯ್ಯ ಮತ್ತು ಎಂ.ನಿಂಗೇಗೌಡ ಕರೆಯುತ್ತಿದ್ದರು ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸದರಿಯವರಿಗೆ ನಿಂಗಯ್ಯ ಎಂದು ಕರೆಯುತ್ತಿರಲಿಲ್ಲ ಎನ್ನುತ್ತಾರೆ. ಅಲ್ಲಿ ಪ್ರತಿವಾದಿಯ ತಂದೆಯನ್ನು ಬಿಟ್ಟು ಬೇರೆ ಯಾರಾದರೂ ನಿಂಗಯ್ಯ ಎನ್ನುವ ಹೆಸರಿನವರು ಇದ್ದಾರೆ ಎಂದರೆ ಗೊತ್ತಿಲ್ಲ ಪ್ರತಿವಾದಿಯ ತಂದೆಯ ಇನ್ನೊಂದು ಹೆಸರು ನಿಂಗಯ್ಯ ಅಂತ ನನಗೆ ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಪರವಾಗಿ ಸಾಕ್ಷಿ ಹಾಕಿರುವ ಜಗದೀಶ್ ಇವರು ಪ್ರತಿವಾದಿಯ ೀತಂದೆಯ ಮೇಲೆ ಸಿಆರ್ 170/2017 ರಲ್ಲಿ ಕ್ರಿಮಿನಲ್ ಕೇಸು ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಪ್ರತಿವಾದಿಯ ತಂದೆ ಕಾಳೇಗೌಡನಿಗೂ ಹಾಗೂ ಸದರಿ ಜಗದೀಶ ಸಹೋದರರ ನಡುವೆ ಪಾಂಡವಪುರ ಕೊರ್ಟ್ನಲ್ಲಿ ಹಲವಾರು ಸಿವಿಲ್ ವ್ಯಾಜ್ಯಗಳು ನಡೆಯುತ್ತಿವೆ ಎಂದರೆ ಗೊತ್ತಿಲ್ಲ. ನಾಗರತ್ನಮ್ಮ ಕೋಂ ಹುಚ್ಚೇಗೌಡ ಇವರು ಓ ಎಸ್ ನಂಬರ್ 119/2018 ರಂತೆ ನನ್ನ ಮೇಲೆ ಈ ಕೇಸಿನ ವಾದಿಯರ ಮೇಲೆ ನನ್ನ ಅಕ್ಕ ಹಾಗೂ ಅಕ್ಕನ ಗಂಡ ಸಿದ್ದೇಗೌಡನ ಮೇಲೆ ಕೇಸು ಹಾಕಿದ್ದಾರೆ ಎಂದರೆ ಸರಿ. ನಾಗಮ್ಮ ಕೋಂ ಬೋರೇಗೌಡ ಇವರು ನಮ್ಮ ಮೇಲೆ ಇನ್ನೊಂದು 120/2018 ರಂತೆ ತೊಂದರೆ ಕೊಡುವ ವಿಚಾರವಾಗಿ ಕೇಸು ಹಾಕಿದ್ದಾರೆ ಎಂದರೆ ಸರಿ. ಸದರಿ ಕೇಸಿನ ದಾವಾ ಸ್ವತ್ತಿನ ಪೂರ್ವಕ್ಕೆ ಹಿಂದೆ ಲಕ್ಕೇಗೌಡರ ಜಮೀನು ಈಗ ಮಂಜುಳಮ್ಮ ಇವರ ಜಮೀನು, ಪಶ್ಚಿಮಕ್ಕೆ ಹಿಂದೆ ನಿಂಗೇಗೌಡರ ಜಮೀನು ಈಗ ಕೆ.ಎನ್ ಕಾಳೇಗೌಡ (ಈ ಕೇಸಿನ ಪ್ರತಿವಾದಿ) ಮತ್ತು ಕುಟುಂಬದವರ ಜಮೀನು ಉತ್ತರಕ್ಕೆ ಕಮಲಮ್ಮನವರ ಮನೆ ದಕ್ಷಿಣಕ್ಕೆ ಹಿಂದೆ ಸಿದ್ದೇಗೌಡರ ಜಮೀನು ಈಗ ನಾಗೇಗೌಡರ ಜಮೀನು ಅಂತ ಬರೆಸಿದ್ದಾರೆ ಎಂದರೆ ಸರಿ. ಸದರಿ ಪಶ್ಚಿಮಕ್ಕೆ ಹೇಳಿರುವ ಕೆ.ಎನ್ ಕಾಳೇಗೌಡ ಈಗ ನ್ಯಾಯಾಲಯದ ಮುಂದೆ ಹಾಜರಿದ್ದಾರೆ ಎಂದರೆ ಸರಿ. ಸದರಿ ಕೇಸಿನ ವಾದಿಯ ಜಮೀನಿನ ಪಶ್ಚಿಮಕ್ಕೆ ಇರುವ ಕಾಳೇಗೌಡನ ಜಮೀನಿಗೆ ನಾವು ಕೇಸು ನಡೆಸುತ್ತಿದ್ದೇವೆ ಎಂದರೆ ಸರಿ. ಸರ್ವೇ ನಂಬರ್ 10 ನಂತರ 10/2 ಯಾವಾಗ ಆಯಿತು ಎಂದು ವಾದ ಪತ್ರದಲ್ಲಿ ಬರೆಸಿಲ್ಲ. ಸದರಿ ಸರ್ವೇ ನಂಬರ್ 10/2 ನ್ನು ಅಳತೆ ಮಾಡಿಸಿದ್ದೀರ ಎಂದರೆ ಸಾಕ್ಷಿಯು ಅಳತೆ ಮಾಡಿಸಿಲ್ಲ ಆದರೆ ಗುರುತು ಮಾಡಿಸಿದ್ದೇವೆ ಎಂದು ಹೇಳುತ್ತಾರೆ. ಕಾಳೇಗೌಡನ ಜಮೀನಿನ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಸುಮಾರು ಜನರಿಗೆ ನಿವೇಶನ ಮಾರಾಟ ಮಾಡಿದ್ದು ಅಲ್ಲಿ ಮನೆ ಕಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ನಿಪಿ8 ರಿಂದ 15 ರಲ್ಲಿ ಕಾಣುವ ಮನೆಗಳು ಯಾರದು ಎಂದು

ಗೊತ್ತಿಲ್ಲ. ಈ ಕೇಸಿನ ವಿಚಾರ ನನಗೆ ಏನು ಗೊತ್ತಿಲ್ಲದೆ ಇದ್ದರೂ ಸಹ ದಾಖಲೆಗಳನ್ನು ಸೃಷ್ಟಿಸಿಕೊಂಡು ಈಗ ನ್ಯಾಯಾಲಯದಲ್ಲಿ ಕುಳಿತಿರುವ ಒ ಎಸ್ ನಂಬರ್ 362/2010 ರ ವಾದಿ ಪರ ಪವರ್ ಆಫ್ ಅಟಾರ್ನಿ ಅಂದರೆ ಶ್ರೀಮತಿ ಕೆ.ಮಂಜುಳ ಇವರ ಚಿತಾನೆ ಮೇರೆಗೆ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಚೆಕ್ಕುಬಂದಿಯಲ್ಲಿ ಹೇಳಿರುವ ಜಮೀನು ಈಗಾಗಲೇ 1975 ರಲ್ಲಿ ಸರ್ಕಾರದಿಂದ ಸ್ವಾಧೀನಪಡಿಸಿಕೊಂಡಿದ್ದು ಈಗ ಅಲ್ಲಿ ಖಾಲಿ ಯಾವುದೇ ದಾವಾ ಸ್ವತ್ತು ಅಸ್ತಿತ್ವದಲ್ಲಿ ಇಲ್ಲದಿದ್ದರೂ ಸಹ ವ್ಯವಸ್ಥ ಪತ್ರದಲ್ಲಿ ಸರ್ವೇ ನಂಬರ್ ತಪ್ಪು ನಮೂದಾದ ಕಾರಣ ಅದನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ನಿಪಿ18 ರಲ್ಲಿ ವಿಸ್ತೀರ್ಣ ಮತ್ತು ಚೆಕ್ಕುಬಂದಿ ಇಲ್ಲ ಎಂದರೆ ಸರಿ. ದಾವಾ ಚೆಕ್ಕುಬಂದಿಯಲ್ಲಿ ಹೇಳಿದ ಜಮೀನಿಗೂ ಹಾಗೂ ಪ್ರತಿವಾದಿ ಕಟ್ಟುತ್ತಿರುವ ಮನೆಗೂ ಎಷ್ಟು ದೂರ ಇದೆ ಎಂದರೆ ಸಾಕ್ಷಿಯು ಅದೇ ಜಮೀನು ಎನ್ನುತ್ತಾರೆ. ಮಾಯಪ್ಪನ ಜಮೀನು ಅಂದರೆ ದಾವಾ ಷೆಡ್ಯೂಲ್ ಆಸ್ತಿ ಹೇಮಗಿರಿ ರಸ್ತೆಯಿಂದ ದಕ್ಷಿಣಕ್ಕೆ ಬರುತ್ತದೆ ಎಂದರೆ ಸರಿ. ಖಾಡ ಸಿದ್ದನ ಜಮೀನು ವಿವಾದದ ಕಟ್ಟಡ ಹೇಮಗಿರಿ ರಸ್ತೆಯ ಉತ್ತರ ದಿಕ್ಕಿಗೆ ಇದೆ ಎಂದರೆ ಸರಿ. ದಾವಾ ಜಮೀನು 1975 ರಲ್ಲಿ ಸರ್ಕಾರದಿಂದ ಸ್ವಾಧೀನಪಡಿಸಿಕೊಂಡಿದ್ದು ದಾವಾ ಜಮೀನು ಅಸ್ತಿತ್ವದಲ್ಲಿಲ್ಲದಿದ್ದರೂ ಸಹ ಶ್ರೀಮತಿ ಮಂಜುಳ ವಕೀಲರ ಮಾತು ಕೇಳಿ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಕಾಳೇಗೌಡರು ಒಟ್ಟು ಎಷ್ಟು ಮನೆ ಕಟ್ಟುತ್ತಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಜಾಗದಲ್ಲಿ ಮನೆ ಕಟ್ಟುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಕಾಳೇಗೌಡರ ಕುಟುಂಬದವರು ಕೆ.ಆರ್.ಪೇಟೆ ಟೌನ್ನಲ್ಲಿ ಒಂದೇ ಮನೆ ಕಟ್ಟುತ್ತಿದ್ದಾರೆ ಎಂದರೆ ಸರಿ. ದಾವಾ ಜಮೀನು ಅಸ್ತಿತ್ವದಲ್ಲಿದ್ದರೂ ಸಹ ತಪ್ಪು ಮಾಹಿತಿ ಕೊಟ್ಟು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಪರವಾಗಿ ಸಾಕ್ಷಿಯ ಲಿಸ್ಟಿ ನಲ್ಲಿರುವ ಜೆ.ಎಸ್ ಚಂದ್ರು ಬಿನ್ ಸಿದ್ದೇಗೌಡ ನನ್ನ ಅಜ್ಜಿಯ ತಂಗಿಯ ಮಗ ಅಂದರೆ ನನ್ನ ಸೋದರ ಮಾವ ಎಂದರೆ ಸರಿ. ದಾವಾ ಜಮೀನಿನ ಸುತ್ತ ಮುತ್ತ 2 ಕಿ.ಮೀನಲ್ಲಿ ಜಗದೀಶನಿಗಾಗಲಿ ಅಥವಾ ಚಂದ್ರುಗಾಗಲೀ ಯಾವುದೇ ಜಮೀನು ಇಲ್ಲ ಎಂದರೆ ಸರಿ. ದ್ವೇಷದಿಂದ ಸಾಕ್ಷಿ ನಂಬರ್ 1 ಜಗದೀಶ ಇವರನ್ನು ಈ ಕೇಸಿನಲ್ಲಿ ಸಾಕ್ಷಿ ನುಡಿಸಲು ಕರೆಸಿದ್ದೇನೆ ಎಂದರೆ ಸರಿಯಲ್ಲ. ಖಾಡನ ಸಿದ್ದನ ಜಮೀನಿನ ಉತ್ತರಕ್ಕೆ ಮತ್ತು ಕಮಲಮ್ಮಳ ದಕ್ಷಿಣಕ್ಕೆ, ಪಶ್ಚಿಮದಿಂದ ತಮ್ಮಯ್ಯನವರಿಂದ ಪೂರ್ವಕ್ಕೆ ಜಮೀನುಗಳು ಸುಮಾರು ಜನರಿಗೆ ಮಾರಾಟವಾಗಿದ್ದು ಅಲ್ಲಿ ಮನೆಗಳನ್ನು ನಿರ್ಮಿಸಿದ್ದು ಸದರಿ ವಿಷಯ ಗೊತ್ತಿದ್ದು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಕ್ಕನ ಗಂಡ ಸಿದ್ದೇಗೌಡ ಈ ಕೇಸಿನ ಪ್ರತಿ ಮುದ್ದೆಗೂ ನ್ಯಾಯಾಲಯದ ಮುಂದೆ ಹಾಜರಿರುತ್ತಾನೆ ಎಂದರೆ ಸರಿ. ಹೋದ ಮುದ್ದತಿನಲ್ಲಿ ನನ್ನ ಪಾಟೀ ಸವಾಲನ್ನು ನೋಡಿದ ನಂತರ ನಾನು ಸುಳ್ಳು ಕೇಸಿ ಹಾಕಿದ ವಿಚಾರ ಸದರಿ ಸಿದ್ದೇಗೌಡನಿಗೆ ಗೊತ್ತಾಗಿದ್ದು ಈ ದಿನ ನ್ಯಾಯಾಲಯದ ಮುಂದೆ ಹಾಜರಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.